# ಅಧ್ಯಾಯ–I ಸಾಮಾನ್ಯ

## 1.1 ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ

2014–15ರ ಸಾಲಿನಲ್ಲಿ ಕರ್ನಾಟಕ ಸರ್ಕಾರವು ಸಂಗ್ರಹಿಸಿದ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ/ವರಮಾನ ಪ್ರಸಕ್ತ ಸಾಲಿನಲ್ಲಿ ಕೇಂದ್ರದ ವಿಭಜನೀಯ ತೆರಿಗೆಗಳಲ್ಲಿನ ರಾಜ್ಯದ ಪಾಲು ಮತ್ತು ಭಾರತ ಸರ್ಕಾರದಿಂದ ಸ್ವೀಕರಿಸಲಾದ ಸಹಾಯಾನುದಾನಗಳು ಹಾಗೂ ತತ್ಸಂಬಂಧಿತ ಹಿಂದಿನ ನಾಲ್ಕು ವರ್ಷಗಳ ಅಂಕಿ–ಸಂಖ್ಯೆಗಳನ್ನು **ಕೋಷ್ಟಕ – 1.1.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1.1**
**ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2010-11 | 2011-12 | 2012-13 | 2013-14 | 2014-15 |
|---|---|---|---|---|---|---|
| 1. | ರಾಜ್ಯ ಸರ್ಕಾರವು ಸಂಗ್ರಹಿಸಿದ ರಾಜಸ್ವ/ವರಮಾನ | | | | | |
| | • ತೆರಿಗೆ ರಾಜಸ್ವ/ವರಮಾನ | 38,473.12 | 46,475.96 | 53,753.55 | 62,603.53 | **70,180.21** |
| | • ತೆರಿಗೆಯೇತರ ರಾಜಸ್ವ/ವರಮಾನ | 3,358.29 | 4,086.86 | 3,966.11 | 4,031.90 | **4,688.24** |
| | ಒಟ್ಟು | **41,831.41** | **50,562.82** | **57,719.66** | **66,635.43** | **74,868.45** |
| 2. | | | | | | |
| | • ಕೇಂದ್ರದ ವಿಭಜನೀಯ ತೆರಿಗೆಗಳು ಮತ್ತು ಸುಂಕಗಳ ನಿವ್ವಳ ಸ್ವೀಕೃತಿಗಳ ಪಾಲು[1] | 9,506.32 | 11,075.04 | 12,647.14 | 13,808.28 | 14,654.25 |
| | • ಸಹಾಯಾನುಧಾನ | 6,868.51 | 8,168.41 | 7,809.42 | 9,098.82 | 14,619.45 |
| | **Total ಒಟ್ಟು** | **16,374.83** | **19,243.45** | **20,456.56** | **22,907.10** | **29,273.70** |
| 3. | ರಾಜ್ಯ ಸರ್ಕಾರದ ಒಟ್ಟಾರೆ ರಾಜಸ್ವ/ವರಮಾನ ಸ್ವೀಕೃತಿಗಳು (1 ಮತ್ತು2) | **58,206.23** | **69,806.27** | **78,176.22** | **89,542.53** | **1,04,142.15** |
| 4. | ರಾಜ್ಯ ಸರ್ಕಾರದ ಒಟ್ಟಾರೆ ರಾಜಸ್ವ ಸ್ವೀಕೃತಿಗಳು (1 ರಿಂದ 3) | **72** | **72** | **74** | **74** | **72** |

2014–15ರ ಸಾಲಿನಲ್ಲಿ ರಾಜ್ಯ ಸರ್ಕಾರವು ಗಳಿಸಿದ ರಾಜಸ್ವವು (₹ 74,868.45 ಕೋಟಿ) ಒಟ್ಟು ರಾಜಸ್ವ ಸ್ವೀಕೃತಿಗಳ ಶೇಕಡಾ 72ರಷ್ಟು ಆಗಿದ್ದಿತು ಎಂಬುದನ್ನು ಮೇಲ್ಕಂಡ ಕೋಷ್ಟಕವು ಸೂಚಿಸುತ್ತದೆ. 2014–15 ಸಾಲಿನಲ್ಲಿನ ಉಳಿದ ಶೇಕಡಾ 28ರಷ್ಟು ಸ್ವೀಕೃತಿಗಳು ಭಾರತ ಸರ್ಕಾರದಿಂದ ಪಡೆದಿರುವುದು.

[1] 'ಎ ತೆರಿಗೆ ರಾಜಸ್ವ'ದಡಿಯಲ್ಲಿದ್ದ ಲೆಕ್ಕಪತ್ರಗಳ ಪ್ರಧಾನ ಶೀರ್ಷಿಕೆಗಳು 0020 ಸಂಸ್ಥೀಯ ತೆರಿಗೆ, 0021 – ಸಂಸ್ಥೀಯ ತೆರಿಗೆಯಲ್ಲದ ಆದಾಯದ ಮೇಲಿನ ತೆರಿಗೆಗಳು, 0028 – ಆದಾಯ ಮತ್ತು ವೆಚ್ಚಗಳ ಮೇಲಿನ ಇತರ ತೆರಿಗೆಗಳು–ಕಿರು ಲೆಕ್ಕಶೀರ್ಷಿಕೆ 901, 0032–ಐಶ್ವರ್ಯದ ಮೇಲಿನ ತೆರಿಗೆಗಳು, 0037–ಸೀಮಾ ಸುಂಕ, 0038–ಕೇಂದ್ರ ಅಬಕಾರಿ ಸುಂಕಗಳು, 0044–ಸೇವಾ ತೆರಿಗೆ ಮತ್ತು 0045–ಸರಕು ಮತ್ತು ಸೇವೆಗಳ ಮೇಲಿನ ಇತರ ತೆರಿಗೆ ಮತ್ತು ಸುಂಕಗಳು –ಕಿರು ಲೆಕ್ಕಶೀರ್ಷಿಕೆ 901ಗಳನ್ನು 2014–15ನೇ ಸಾಲಿಗೆ ಕರ್ನಾಟಕ ಸರ್ಕಾರದ ಹಣಕಾಸು ಲೆಕ್ಕಪತ್ರಗಳಲ್ಲಿ ದಾಖಲಿಸಲಾಗಿದ್ದಂತೆ ರಾಜ್ಯಗಳಿಗೆ ಹಂಚಿಕೆ ಮಾಡಲಾಗಿದ್ದ ನಿವ್ವಳ ಸ್ವೀಕೃತಿಗಳ ಪಾಲು, ಇವುಗಳ ಅಡಿಯಲ್ಲಿನ ಅಂಕಿಸಂಖ್ಯೆಗಳನ್ನು ರಾಜ್ಯ ಸರ್ಕಾರ ಗಳಿಸಿದ ತೆರಿಗೆಗಳಿಂದ ಪ್ರತ್ಯೇಕಿಸಿ ಕೇಂದ್ರದ ವಿಭಜನೀಯ ತೆರಿಗೆಗಳು ಮತ್ತು ಸುಂಕಗಳ ನಿವ್ವಳ ಸ್ವೀಕೃತಿಗಳ ಪಾಲಿನಲ್ಲಿ ಸೇರಿಸಲಾಗಿದೆ.

**1.1.2** 2010–11ರಿಂದ 2014–15ರ ಅವಧಿಯಲ್ಲಿ ಸಂಗ್ರಹಿಸಿದ ತೆರಿಗೆ ರಾಜಸ್ವದ ವಿವರಗಳನ್ನು ಕೋಷ್ಟಕ **1.1.2**ರಲ್ಲಿ ನೀಡಲಾಗಿದೆ:

**ಕೋಷ್ಟಕ 1.1.2**
**ತೆರಿಗೆ ರಾಜಸ್ವ ಸ್ವೀಕೃತಿಗಳ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ರಾಜಸ್ವದ ಶೀರ್ಷಿಕೆ | 2010-11 | | 2011-12 | | 2012-13 | | 2013-14 | | 2014-15 | | 2013-14 ಕ್ಕೆ ಹೋಲಿಸಿದಲ್ಲಿ 2014–15ರಲ್ಲಿ ಶೇಕಡಾವಾರು ಹೆಚ್ಚಳ (+) ಶೇಕಡಾವಾರು ಇಳಿಕೆ (–) | |
|---|---|---|---|---|---|---|---|---|---|---|---|---|---|
| | | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ |
| 1. | ಮಾರಾಟಗಳು, ವಾಣಿಜ್ಯ ಮುಂತಾದವುಗಳ ಮೇಲಿನ ತೆರಿಗೆಗಳು | 20,160.00 | 20,234.69 | 24,170.00 | 25,020.02 | 27,735.00 | 28,414.44 | 33,590.00 | 33,719.35 | 37,250.00 | 38,286.03 | 10.90 | 13.54 |
| 2. | ರಾಜ್ಯ ಅಬಕಾರಿ | 7,425.00 | 8,284.74 | 9,115.00 | 9,775.43 | 10,775.00 | 11,069.73 | 12,600.00 | 12,828.36 | 14,430.00 | 13,801.08 | 14.52 | 7.58 |
| 3. | ಮುದ್ರಾಂಕ ಶುಲ್ಕಗಳು | 3,500.00 | 3,531.08 | 4,030.00 | 4,623.20 | 5,200.00 | 5,225.02 | 6,500.00 | 6,188.76 | 7,450.00 | 7,025.85 | 14.62 | 13.53 |
| 4. | ಮೋಟಾರು ವಾಹನಗಳ ಮೇಲಿನ ತೆರಿಗೆಗಳು | 2,050.00 | 2,550.02 | 2,630.00 | 2,956.72 | 3,350.00 | 3,829.52 | 4,120.00 | 3,911.50 | 4,350.00 | 4,541.57 | 5.58 | 16.11 |
| 5. | ಇತರವುಗಳು | 3,093.31 | 3,872.59 | 3,872.09 | 4,100.59 | 4,760.69 | 5,214.84 | 5,653.99 | 5,955.56 | 6,389.75 | 6,525.68 | 13.01 | 9.57 |
| | **ಒಟ್ಟು** | **36,228.31** | **38,473.12** | **43,817.09** | **46,475.96** | **51,820.69** | **53,753.55** | **62,463.99** | **62,603.53** | **69,869.75** | **70,180.21** | **11.86** | **12.10** |

**1.1.3** 2010–11ರಿಂದ 2014–15ರ ಅವಧಿಯಲ್ಲಿ ಸಂಗ್ರಹಿಸಲಾದ ತೆರಿಗೆಯೇತರ ರಾಜಸ್ವದ ವಿವರಗಳನ್ನು **ಕೋಷ್ಟಕ 1.1.3**ರಲ್ಲಿ ಸೂಚಿಸಲಾಗಿದೆ:

**ಕೋಷ್ಟಕ 1.1.3 - ಸಂಗ್ರಹಿಸಲಾದ ತೆರಿಗೆಯೇತರ ಸ್ವೀಕೃತಿಗಳ ವಿವರಗಳು**

**(₹ ಕೋಟಿಯಲ್ಲಿ )**

| ಕ್ರಮ ಸಂಖ್ಯೆ | ರಾಜಸ್ವದ ಶೀರ್ಷಿಕೆ | 2010-11 | | 2011-12 | | 2012-13 | | 2013-14 | | 2014-15 | | 2013-14 ಕ್ಕೆ ಹೋಲಿಸಿದಲ್ಲಿ 2014–15ರಲ್ಲಿ ಶೇಕಡಾವಾರು ಹೆಚ್ಚಳ (+) ಶೇಕಡಾವಾರು ಇಳಿಕೆ (–) | |
|---|---|---|---|---|---|---|---|---|---|---|---|---|---|
| | | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ |
| 1 | ಕಬ್ಬಿಣೇತರ ಲೋಹ ಗಳ ಗಣಿಗಾರಿಕೆ ಮತ್ತು ಲೋಹ ಉದ್ಯಮಗಳು | 1,000.00 | 1,185.96 | 1,500.00 | 1,326.84 | 1,500.00 | 1,496.49 | 1,750.00 | 1,474.49 | 1,750.00 | 1931.10 | 0.00 | 30.97 |
| 2. | ಇತರೆ ತೆರಿಗೆಯೇತರ ಸ್ವೀಕೃತಿಗಳು | 1,819.90 | 2,172.33 | 2,174.79 | 2,760.02 | 1692.82 | 2469.62 | 2,288.28 | 2,557.41 | 2,723.43 | 2757.14 | 19.02 | 7.81 |
| | **ಒಟ್ಟು** | **2,819.90** | **3,358.29** | **3,674.79** | **4,086.86** | **3,192.82** | **3,966.11** | **4,038.28** | **4,031.90** | **4,473.43** | **4688.24** | **10.78** | **16.28** |

## 1.2 ರಾಜಸ್ವ ಬಾಕಿಗಳ ವಿಶ್ಲೇಷಣೆ

ರಾಜಸ್ವದ ಕೆಲವು ಪ್ರಧಾನ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ 31 ಮಾರ್ಚ್ 2015ರಲ್ಲಿದ್ದಂತೆ ರಾಜಸ್ವ ಬಾಕಿಗಳು **ಕೋಷ್ಟಕ–1.2**ರಲ್ಲಿ ವಿವರಿಸಿರುವಂತೆ ₹ 6,704.90 ಕೋಟಿಯಷ್ಟಿದ್ದವು.

**ಕೋಷ್ಟಕ-1.2**
**ರಾಜಸ್ವ/ವರಮಾನದ ಬಾಕಿಗಳು**

| ಕ್ರಮ ಸಂಖ್ಯೆ | ರಾಜಸ್ವದ ಶೀರ್ಷಿಕೆ | 31 ಮಾರ್ಚ್ 2015ರಲ್ಲಿದ್ದಂತೆ ಬಾಕಿ ಇದ್ದಂತಹ ಒಟ್ಟು ಮೊತ್ತ | ಇಲಾಖೆಯ ಉತ್ತರಗಳು |
|---|---|---|---|
| 1. | 0030 | 83.27 | ಮಾಹಿತಿಯನ್ನು ಒದಗಿಸಿಲ್ಲ. |
| 2. | 0039 | 808.59 | ಒಟ್ಟಾರೆ ಬಾಕಿಗಳ ಪೈಕಿ, ₹ 75.07 ಕೋಟಿ ಮೊತ್ತವು ನ್ಯಾಯಾಲಯಗಳ ತಡೆಯಲ್ಲಿದೆ, ₹ 303.87 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ, ಅದು ಕಂದಾಯ ಇಲಾಖೆಯ ಮೂಲಕ ವಸೂಲಾತಿಯ ವ್ಯಾಪ್ತಿಯಲ್ಲಿದೆ. |
| 3. | 0040 | 5,813.04 | ಒಟ್ಟಾರೆ ಬಾಕಿಗಳ ಪೈಕಿ ₹ 1,019.61 ಕೋಟಿ ಮೊತ್ತಕ್ಕೆ ನ್ಯಾಯಾಲಯಗಳ ತಡೆಯಿದೆ, ₹ 156.46 ಕೋಟಿ ಮೊತ್ತವು ಬಿಐಎಫ್‌ಆರ್[2]ಮುಂದಿದೆ, ₹ 191.64 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ಸಂಸ್ಥೆಗಳು ಸಮಾಪನ ಹಂತದಲ್ಲಿವೆ, ₹ 137.74 ಕೋಟಿ ಮೊತ್ತವು ಕಂದಾಯ ವಸೂಲಾತಿ ಪ್ರಮಾಣಪತ್ರಗಳ ವ್ಯಾಪ್ತಿಯಲ್ಲಿದೆ, ₹ 3,671.20 ಕೋಟಿ ಮೊತ್ತವನ್ನು ಇಲಾಖಾ ವಸೂಲಾತಿಯ ವ್ಯಾಪ್ತಿಯಲ್ಲಿದೆ, ₹ 57.33 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ವಸೂಲಾತಿಯು ಸಾಧ್ಯವಿಲ್ಲದೇ ದಾಖಲೆಗಳಿಂದ ತೆಗೆದುಹಾಕುವ (ರೈಟ್ ಆಫ್) ಪ್ರಸ್ತಾವನೆಗಳಿವೆ ಹಾಗೂ ಸ್ವೀಕರಿಸಲಾಗಿರುವ of ₹ 136.76 ಕೋಟಿ ಮೊತ್ತವು ಪರಿಶೀಲನೆಯ ಅಡಿಯಲ್ಲಿದೆ. |
| ಒಟ್ಟು | | **6,704.90** | |

## 1.3 ಇಲಾಖೆಯು ಪತ್ತೆ ಹಚ್ಚಿರುವ ತೆರಿಗೆ ವಂಚನೆಯ ಪ್ರಕರಣಗಳು

ಸಾರಿಗೆ ಹಾಗೂ ರಾಜ್ಯ ಅಬಕಾರಿ ಇಲಾಖೆಗಳು ಪತ್ತೆ ಹಚ್ಚಿರುವ ತೆರಿಗೆ ವಂಚನೆಯ ಪ್ರಕರಣಗಳ ವಿವರಗಳನ್ನು **ಕೋಷ್ಟಕ 1.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.3 –**
**ತೆರಿಗೆ ಪಾವತಿಯಿಂದ ತಪ್ಪಿಸಿಕೊಂಡಿದ್ದಂತಹ ಪ್ರಕರಣಗಳು**

| ಕ್ರಮ ಸಂಖ್ಯೆ | ರಾಜಸ್ವದ ಶೀರ್ಷಿಕೆ | 31ಮಾರ್ಚ್ 2014ರಲ್ಲಿ ಇದ್ದಂತೆ ಬಾಕಿ ಇದ್ದಂತಹ ಪ್ರಕರಣಗಳು | 2014–15ರಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳು | ಒಟ್ಟು | ಕರನಿರ್ಧಾರಣೆ/ವಿಚಾರಣೆ/ ತನಿಖೆಯನ್ನು ಪೂರ್ಣಗೊಳಿಸಲಾದ ಹಾಗೂ ದಂಡ ಇತ್ಯಾದಿಗಳ ಜೊತೆಯಲ್ಲಿ ಹೆಚ್ಚುವರಿ ತಗಾದೆಯನ್ನು ಸೃಷ್ಟಿಸಲಾದ ಪ್ರಕರಣಗಳ ಸಂಖ್ಯೆ | | 31 ಮಾರ್ಚ್ 2015ರಲ್ಲಿದ್ದಂತೆ ಅಂತಿಮಗೊಳಿಸಲು ಬಾಕಿ ಇದ್ದಂತಹ ಪ್ರಕರಣಗಳ ಸಂಖ್ಯೆ |
|---|---|---|---|---|---|---|---|
| | | | | | ಪ್ರಕರಣಗಳ ಸಂಖ್ಯೆ | ತಗಾದೆಯ ಮೊತ್ತ ₹ | |
| 1. | 0039 | 02 | 0 | 02 | 0 | 0 | 02 |
| 2. | 0041 | 04 | 02 | 06 | 0 | 0 | 06 |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ತೆರಿಗೆ ಪಾವತಿಯಿಂದ ತಪ್ಪಿಸಿಕೊಂಡಿರುವ ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ಯಾವುದೇ ಪ್ರಗತಿಯಾಗಿಲ್ಲ. ರಾಜಸ್ವ/ವರಮಾನದ ಹಿತದೃಷ್ಟಿಯಿಂದ ಈ ಪ್ರಕರಣಗಳನ್ನು ಅಂತಿಮಗೊಳಿಸುವಲ್ಲಿ ಇಲಾಖೆಗಳು ತ್ವರಿತ ಕ್ರಮವನ್ನು ತೆಗೆದುಕೊಳ್ಳಬೇಕು.

ವಂಚನೆಗಳು ಹಾಗೂ ಪಾವತಿಗಳಿಂದ ತಪ್ಪಿಸಿಕೊಂಡಿರುವಿಕೆಯ ಪ್ರಕರಣಗಳು, ಯಾವುದಾದರೂ ಇದ್ದಲ್ಲಿ, ಅವುಗಳನ್ನು ಪತ್ತೆ ಹಚ್ಚಿರುವ ಬಗ್ಗೆ ವಿವರಗಳನ್ನು ಒದಗಿಸುವಂತೆ ವಾಣಿಜ್ಯ ತೆರಿಗೆಗಳು, ಇಂಧನ ಮತ್ತು ಕಂದಾಯ ಇಲಾಖೆಗಳನ್ನು ಕೋರಲಾಯಿತಾದರೂ (ಜುಲೈ 2015), ಇನ್ನೂ ಸ್ವೀಕೃತಗೊಂಡಿಲ್ಲ (ನವೆಂಬರ್ 2015). ಅಂತಹ ಯಾವುದೇ ಪ್ರಕರಣಗಳನ್ನು ಪತ್ತೆ ಹಚ್ಚಿಲ್ಲ ಎಂಬುದಾಗಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯು ತಿಳಿಸಿತು.

[2] ಕೈಗಾರಿಕೆ ಹಾಗೂ ಹಣಕಾಸು ಪುನರ್–ನಿರ್ಮಾಣಕ್ಕಾಗಿನ ಮಂಡಳಿ

## 1.4 ಬಾಕಿ ಇರುವ ಮರುಪಾವತಿ ಪ್ರಕರಣಗಳು

ಇಲಾಖೆಗಳು ಸಲ್ಲಿಸಿರುವ ವರದಿಗಳಂತೆ, 2013–14 ಹಾಗೂ 2014–15 ಸಾಲಿನ ಪ್ರಾರಂಭದಲ್ಲಿದ್ದ ಮರುಪಾವತಿ ಪ್ರಕರಣಗಳ ಸಂಖ್ಯೆ, ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದ ಕೋರಿಕೆಗಳು, ಪ್ರಸಕ್ತ ಸಾಲಿನಲ್ಲಿ ಸಮ್ಮತಿಸಲಾದ ಮರುಪಾವತಿಗಳು ಹಾಗೂ 2014–15 ಸಾಲಿನ ಮುಕ್ತಾಯದ ಅವಧಿಯಲ್ಲಿ ಬಾಕಿ ಇದ್ದಂತಹ ಪ್ರಕರಣಗಳ ವಿವರಗಳನ್ನು **ಕೋಷ್ಟಕ 1.4**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.4**
**ಬಾಕಿ ಇರುವ ಮರುಪಾವತಿ ಪ್ರಕರಣಗಳ ವಿವರಗಳು**

**(₹ ಕೋಟಿಯಲ್ಲಿ)**

| ಕ್ರ ಮ ಸಂಖ್ಯೆ | ವಿವರಗಳು | 2014-15 | |
|---|---|---|---|
| | | ಪ್ರಕರಣಗಳ ಸಂಖ್ಯೆ | ಮೊತ್ತ |
| 1. | ವರ್ಷದ ಪ್ರಾರಂಭದಲ್ಲಿ ಬಾಕಿ ಇದ್ದಂತಹ ಕೋರಿಕೆಗಳು | 1,423 | 241.68 |
| 2. | ಪ್ರಸಕ್ತ ವರ್ಷದಲ್ಲಿ ಸ್ವೀಕರಿಸಲಾದ ಕೋರಿಕೆಗಳು | 5,761 | 1,616.39 |
| 3. | ಪ್ರಸಕ್ತ ವರ್ಷದಲ್ಲಿ ಮಾಡಲಾದ ಮರುಪಾವತಿಗಳು | 6,079 | 1,427.95 |
| 4. | ವರ್ಷದ ಅಂತ್ಯದಲ್ಲಿ ಬಾಕಿ ಇದ್ದಂತಹ ಪ್ರಕರಣಗಳು | 1,105 | 430.12 |

## 1.5 ಲೆಕ್ಕಪರಿಶೋಧನೆಯ ಕಡೆಗೆ ಸರ್ಕಾರ/ಇಲಾಖೆಗಳ ಪ್ರತಿಕ್ರಿಯೆ

ಮಹಾಲೇಖಪಾಲರು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಇವರು ಹಣಕಾಸು ವ್ಯವಹಾರಗಳ ಪರೀಕ್ಷಾ ಪರಿಶೀಲನೆ ಮಾಡುವುದಕ್ಕಾಗಿ ಹಾಗೂ ನಿಗಧಿತ ನಿಯಮಗಳು ಮತ್ತು ಕಾರ್ಯವಿಧಾನಗಳ ಪ್ರಕಾರ ಪ್ರಮುಖ ಲೆಕ್ಕಪತ್ರಗಳು ಹಾಗೂ ಇನ್ನಿತರ ದಾಖಲೆಗಳನ್ನು ಇಟ್ಟಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸರ್ಕಾರದ ಇಲಾಖೆಗಳನ್ನು ನಿಯತಕಾಲಿಕವಾಗಿ ಪರೀಕ್ಷಣೆ ಮಾಡುತ್ತಾರೆ. ಪರೀಕ್ಷಣೆಗಳ ಸಮಯದಲ್ಲಿ ಪತ್ತೆ ಹಚ್ಚಲಾದ ನಿಯಮ ಬಾಹಿರತೆಗಳನ್ನು ಅಳವಡಿಸಿಕೊಳ್ಳಲಾಗುವ ಪರೀಕ್ಷಣಾ ವರದಿಗಳ ಮೂಲಕ ಈ ಪರೀಕ್ಷಣೆಗಳನ್ನು ಅನುಸರಿಸಲಾಗುವುದು, ಪರೀಕ್ಷಣೆಯ ವೇಳೆಯಲ್ಲಿ ಕಂಡು ಬಂದಂತಹ ಪ್ರಮುಖ ಲೋಪದೋಷಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಲು ಸಾಧ್ಯವಾಗದಿದ್ದಲ್ಲಿ, ಈ ಪರೀಕ್ಷಣಾ ವರದಿಗಳನ್ನು, ಪರೀಕ್ಷಣೆಗೆ ಒಳಪಟ್ಟ ಕಚೇರಿಗಳ ಮುಖ್ಯಸ್ಥರುಗಳಿಗೆ ನೀಡುವುದರ ಜೊತೆಗೆ, ಪ್ರತಿಯನ್ನು ತದನಂತರದ ಉನ್ನತ ಅಧಿಕಾರಿಗಳಿಗೆ ದೋಷಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಕಳುಹಿಸಿಕೊಡಲಾಗುವುದು. ಪ್ರಧಾನ ಮಹಾಲೇಖಪಾಲರಿಂದ ನೀಡಲ್ಪಟ್ಟ ಪರೀಕ್ಷಣಾ ವರದಿಗಳಲ್ಲಿ ಅಡಕವಾಗಿರುವ ಅಂಶಗಳಿಗೆ ಇಲಾಖೆಗಳ ಮುಖ್ಯಸ್ಥರು/ಸರ್ಕಾರವು ತ್ವರಿತವಾಗಿ ಸ್ಪಂದಿಸಿ, ತಪ್ಪುಗಳನ್ನು ಮತ್ತು ನ್ಯೂನತೆಗಳನ್ನು ಸರಿಪಡಿಸಿ, ಪರೀಕ್ಷಣಾ ವರದಿಗಳನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಒಳಗೆ ಅನುಸರಣಾ ಕ್ರಮಗಳನ್ನು ತೆಗೆದುಕೊಂಡಿದ್ದರ ಬಗ್ಗೆ ಪ್ರಾಥಮಿಕ ಉತ್ತರದ ಮೂಲಕ ವರದಿಯನ್ನು ಪ್ರಧಾನ ಮಹಾಲೇಖಪಾಲರಿಗೆ ಕಳುಹಿಸುವುದು ಅತ್ಯಗತ್ಯವಾಗಿದೆ. ಗಂಭೀರ ಸ್ವರೂಪದ ಹಣಕಾಸಿನ ನಿಯಮಬಾಹಿರತೆಗಳನ್ನು ಇಲಾಖೆಗಳ ಮುಖ್ಯಸ್ಥರುಗಳು/ಸರ್ಕಾರದ ಗಮನಕ್ಕೆ ತರಲಾಗುವುದು.

4,022 ಪರೀಕ್ಷಣಾ ವರದಿಗಳಿಗೆ ಸಂಬಂಧಿಸಿದಂತೆ ₹ 2,061.05 ಕೋಟಿ ಮೊತ್ತವು ಒಳಗೊಂಡಂತೆ 9,573 ಕಂಡಿಕೆಗಳು ಜೂನ್ 2015ರ ಅಂತ್ಯದಲ್ಲಿ ಬಾಕಿ ಉಳಿದಿದ್ದವು (ಡಿಸೆಂಬರ್ 2014ರವರೆಗೆ ನೀಡಲಾಗಿದ್ದ ಪರೀಕ್ಷಣಾ ವರದಿಗಳು). ಹಿಂದಿನ ಎರಡು ಸಾಲುಗಳಿಗೆ ಅನುಗುಣವಾದ ಅಂಕಿಸಂಖ್ಯೆಗಳ ಜೊತೆಯಲ್ಲಿ ವಿವರಗಳನ್ನು **ಕೋಷ್ಟಕ 1.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5**
**ಬಾಕಿ ಇರುವ ಪರೀಕ್ಷಣಾ ವರದಿಗಳ ವಿವರಗಳು**

| | ಜೂನ್ 2013 | ಜೂನ್ 2014 | ಜೂನ್ 2015 |
|---|---|---|---|
| **ಇತ್ಯರ್ಥಗೊಳ್ಳಲು ಬಾಕಿ ಇರುವ ಪರೀಕ್ಷಣಾ ವರದಿಗಳ ಸಂಖ್ಯೆ** | 3,363 | 4,114 | 4,022[3] |
| **ಬಾಕಿ ಇರುವ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಸಂಖ್ಯೆ** | 7,283 | 8,753 | 9,573 |
| **ಒಳಗೊಂಡಿರುವ ರಾಜಸ್ವದ ಮೊತ್ತ (₹ ಕೋಟಿಯಲ್ಲಿ)** | 1,550.33 | 1,851.83 | 2,061.05 |

[3] 1 ಜುಲೈ 2013ರಿಂದ ರಾಜಸ್ವ ವಲಯ ಲೆಕ್ಕಪರಿಶೋಧನೆಯ ಅಡಿಯಲ್ಲಿ ತರಲಾದಂತಹ ಭೂ ಕಂದಾಯ ಕಚೇರಿಗಳನ್ನು ಒಳಗೊಂಡಿದೆ.

**1.5.1** 30 ಜೂನ್ 2015ರಲ್ಲಿದ್ದಂತೆ ಇಲಾಖಾವಾರು ಬಾಕಿ ಇರುವ ಪರೀಕ್ಷಣಾ ವರದಿಗಳು ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು ಹಾಗೂ ಒಳಗೊಂಡಿರುವ ಮೊತ್ತಗಳ ವಿವರಗಳನ್ನು ಈ ಕೆಳಗಿನ **ಕೋಷ್ಟಕ 1.5.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5.1**
**ಪರೀಕ್ಷಣಾ ವರದಿಗಳ ಇಲಾಖಾವಾರು ವಿವರಗಳು**

| ಕ್ರಮ ಸಂಖ್ಯೆ | ಇಲಾಖೆಯ ಹೆಸರು | ಸ್ವೀಕೃತಿಗಳ ಸ್ವರೂಪ | ಬಾಕಿ ಇರುವ ಪರೀಕ್ಷಣಾ ವರದಿಗಳ ಸಂಖ್ಯೆ | ಬಾಕಿ ಇರುವ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳ ಸಂಖ್ಯೆ | ಒಳಗೊಂಡಿರುವ ಹಣಕಾಸಿನ ಮೌಲ್ಯ (ಕೋಟಿಯಲ್ಲಿ) |
|---|---|---|---|---|---|
| 1. | ಹಣಕಾಸು | ವಾಣಿಜ್ಯ ತೆರಿಗೆಗಳು | 1,657 | 4,894 | 443.34 |
| 2. | | ರಾಜ್ಯ ಅಬಕಾರಿ | 589 | 900 | 374.36 |
| 3. | ಕಂದಾಯ | ಭೂ ಕಂದಾಯ | 533 | 1,403 | 314.69 |
| 4. | | ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕಗಳು | 704 | 1,351 | 360.69 |
| 5. | ಸಾರಿಗೆ | ಮೋಟಾರು ವಾಹನಗಳ ಮೇಲಿನ ತೆರಿಗೆ | 379 | 607 | 59.56 |
| 6. | ವಾಣಿಜ್ಯಮತ್ತು ಕೈಗಾರಿಕೆಗಳು | ಖನಿಜ ಸ್ವೀಕೃತಿಗಳು | 154 | 404 | 503.92 |
| 7. | ಇಂಧನ | ವಿದ್ಯುತ್ ತೆರಿಗೆ | 6 | 14 | 4.49 |
| | **ಒಟ್ಟು** | | **4,022** | **9,573** | **2,061.05** |

2014–15ರಲ್ಲಿ ನೀಡಲಾಗಿದ್ದಂತಹ 459 ಪರೀಕ್ಷಣಾ ವರದಿಗಳ ಪೈಕಿ, 358 ಪರೀಕ್ಷಣಾ ವರದಿಗಳಿಗೆ, ಅವುಗಳನ್ನು ನೀಡಿದ ದಿನಾಂಕದಿಂದ ಒಂದು ತಿಂಗಳ ಒಳಗೆ ಕಚೇರಿಗಳ ಮುಖ್ಯಸ್ಥರುಗಳಿಂದ ಪ್ರಾಥಮಿಕ ಉತ್ತರಗಳನ್ನೂ ಸಹ ಲೆಕ್ಕಪರಿಶೋಧನೆಯು ಸ್ವೀಕರಿಸಿರುವುದಿಲ್ಲ. ಉತ್ತರಗಳನ್ನು ಸ್ವೀಕರಿಸದ ಕಾರಣ ಈ ಬೃಹತ್ ಪ್ರಮಾಣದಲ್ಲಿ ಬಾಕಿ ಇರುವ ಪರೀಕ್ಷಣಾ ವರದಿಗಳು ಕಚೇರಿಗಳ ಹಾಗೂ ಇಲಾಖೆಗಳ ಮುಖ್ಯಸ್ಥರುಗಳು, ಮಹಾಲೇಖಾಪಾಲರು ಪರೀಕ್ಷಣಾ ವರದಿಗಳಲ್ಲಿ ಸ್ಪಷ್ಟಪಡಿಸಿರುವ ನ್ಯೂನತೆಗಳನ್ನು, ಲೋಪದೋಷಗಳನ್ನು ಹಾಗೂ ನಿಯಮ ಬಾಹಿರತೆಗಳನ್ನು ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳಲಿಲ್ಲ ಎಂಬುದನ್ನು ಸೂಚಿಸುತ್ತದೆ.

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳಿಗೆ ತ್ವರಿತ ಹಾಗೂ ಸೂಕ್ತ ಪ್ರತಿಕ್ರಿಯೆಯನ್ನು ನೀಡುವುದಕ್ಕಾಗಿ ಒಂದು ಪರಿಣಾಮಕಾರಿ ವ್ಯವಸ್ಥೆಯನ್ನು ಹೊಂದುವುದನ್ನು ಸರ್ಕಾರವು ಪರಿಗಣಿಸಬೇಕು.

## 1.5.2 ಇಲಾಖಾ ಲೆಕ್ಕಪರಿಶೋಧನಾ ಸಮಿತಿ ಸಭೆಗಳು

ಪರೀಕ್ಷಣಾ ವರದಿಗಳಲ್ಲಿ ಒಳಗೊಂಡಿರುವ ಲೆಕ್ಕಪರಿಶೋಧನಾ ಅಂಶಗಳನ್ನು ಇತ್ಯರ್ಥಪಡಿಸುವುದನ್ನು ತ್ವರಿತಗೊಳಿಸುವುದಕ್ಕಾಗಿ ಎಲ್ಲಾ ಇಲಾಖೆಗಳ ಸಚಿವಾಲಯದಲ್ಲಿ 'ತಾತ್ಪೂರ್ತಿಕ ಸಮಿತಿಗಳನ್ನು' ರಚಿಸುವಂತೆ ಸರ್ಕಾರವು ನಿರ್ದೇಶನಗಳನ್ನು ನೀಡಿದ್ದಿತು (ಮಾರ್ಚ್ 1968). ಈ ಸಮಿತಿಗಳು ಸಂಬಂಧಿತ ಆಡಳಿತಾತ್ಮಕ ಇಲಾಖೆಗಳ ಕಾರ್ಯದರ್ಶಿಗಳ ನೇತೃತ್ವದಲ್ಲಿರಬೇಕು ಹಾಗೂ ರಾಜ್ಯ ಸರ್ಕಾರದ ನಾಮನಿರ್ದೇಶಿತ ಅಧಿಕಾರಿಗಳು ಹಾಗೂ ಮಹಾಲೇಖಾಪಾಲರಿಂದ ನಾಮನಿರ್ದೇಶನಗೊಂಡಂತಹ ಓರ್ವ ಅಧಿಕಾರಿಯು ಹಾಜರಿರಬೇಕು. ಈ ಸಮಿತಿಗಳು ನಿಯತಕಾಲಿಕವಾಗಿ ಹಾಗೂ ಕಡೆಯ ಪಕ್ಷ ಮೂರು ತಿಂಗಳಿಗೆ ಒಂದು ಸಲ ಸಭೆ ಸೇರಬೇಕು.

2014–15 ಸಾಲಿನಲ್ಲಿ ನಡೆಸಲಾದ ಇಲಾಖಾವಾರು ತಾತ್ಪೂರ್ತಿಕ ಸಮಿತಿ ಸಭೆಗಳು ಹಾಗೂ ಇತ್ಯರ್ಥಗೊಳಿಸಲಾದ ಕಂಡಿಕೆಗಳ ಸಂಖ್ಯೆಯು **ಕೋಷ್ಟಕ 1.5.2**ರಲ್ಲಿ ತೋರಿಸಿರುವಂತಿದ್ದವು:

**ಕೋಷ್ಟಕ 1.5.2**
**ಇಲಾಖಾ ಲೆಕ್ಕಪರಿಶೋಧನಾ ಸಮಿತಿ ಸಭೆಗಳ ವಿವರಗಳು**

| ಇಲಾಖೆ | ನಡೆಸಲಾದ ಸಭೆಗಳ ಸಂಖ್ಯೆ | ಇತ್ಯರ್ಥಗೊಳಿಸಲಾದ ಕಂಡಿಕೆಗಳ ಸಂಖ್ಯೆ | ಹಣಕಾಸಿನ ಮೌಲ್ಯ (₹ ಕೋಟಿಯಲ್ಲಿ) |
|---|---|---|---|
| ವಾಣಿಜ್ಯ ತೆರಿಗೆಗಳು | 05 | 205 | 345.05 |
| ಭೂ ಕಂದಾಯ | 02 | 157 | 1554.64 |
| ರಾಜ್ಯ ಅಬಕಾರಿ | 01 | 63 | 499.39 |
| ಮೋಟಾರು ವಾಹನಗಳ ಮೇಲಿನ ತೆರಿಗೆ | 01 | 28 | 91.06 |

ಬೃಹತ್ ಪ್ರಮಾಣದಲ್ಲಿ ಬಾಕಿ ಇರುವ ಪರೀಕ್ಷಣಾ ವರದಿಗಳು ಹಾಗೂ ಕಂಡಿಕೆಗಳಿಗೆ ಹೋಲಿಸಿದಲ್ಲಿ ನಡೆಸಲಾದ ಸಭೆಗಳು ಹಾಗೂ ಇತ್ಯರ್ಥಗೊಳಿಸಲಾದ ಕಂಡಿಕೆಗಳ ಸಂಖ್ಯೆಯು ಗೌಣವಾಗಿದ್ದಿತು. ರಾಜಸ್ವ ವಲಯ ಲೆಕ್ಕಪರಿಶೋಧನೆಯ ಅಡಿಯಲ್ಲಿನ ಮೂರು ಇಲಾಖೆಗಳು, ಅವೆಂದರೆ ಮುದ್ರಾಂಕಗಳು ಮತ್ತು ನೋಂದಣಿ, ಇಂಧನ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಗಳು ಲೆಕ್ಕಪರಿಶೋಧನಾ ಸಮಿತಿ ಸಭೆಗಳನ್ನು ನಡೆಸಿರಲಿಲ್ಲ.

## 1.5.3 ಲೆಕ್ಕಪರಿಶೋಧನಾ ಪರಿಶೀಲನೆಗಾಗಿ ದಾಖಲೆಗಳನ್ನು ಒದಗಿಸದಿದ್ದುದು

ತೆರಿಗೆ ರಾಜಸ್ವ/ತೆರಿಗೆಯೇತರ ರಾಜಸ್ವ ಕಚೇರಿಗಳ ಸ್ಥಳೀಯ ಲೆಕ್ಕಪರಿಶೋಧನಾ ಕಾರ್ಯಕ್ರಮವನ್ನು ಸಾಕಷ್ಟು ಮುಂಚಿತವಾಗಿಯೇ ಪೂರ್ವಭಾವಿಯಾಗಿ ಯೋಜಿಸಲಾಗುವುದು ಹಾಗೂ ಲೆಕ್ಕಪರಿಶೋಧನೆಯ ಪರಿಶೀಲನೆಗೆ ಸಂಬಂಧಿತ ದಾಖಲೆಗಳನ್ನು ಸಿದ್ಧವಾಗಿಟ್ಟುಕೊಂಡಿರುವುದನ್ನು ಸಾಧ್ಯಗೊಳಿಸುವುದಕ್ಕಾಗಿ, ಸಾಮಾನ್ಯವಾಗಿ ಲೆಕ್ಕಪರಿಶೋಧನೆಯನ್ನು ಪ್ರಾರಂಭಿಸುವುದಕ್ಕೆ ಒಂದು ತಿಂಗಳು ಮುಂಚಿತವಾಗಿಯೇ ತಿಳಿವಳಿಕೆ ಪತ್ರವನ್ನು ಇಲಾಖೆಗಳಿಗೆ ನೀಡಲಾಗುವುದು.

2014–15ಸಾಲಿನಲ್ಲಿ 621ರಷ್ಟು ಸಂಖ್ಯೆಯ ಕರನಿರ್ಧಾರಣಾ ಕಡತಗಳು, ಸಲ್ಲಿಕೆಗಳು, ಮರುಪಾವತಿಗಳು, ವಹಿಗಳು/ರಿಜಿಸ್ಟರುಗಳು ಹಾಗೂ ಇನ್ನಿತರೆ ಸಂಬಂಧಿತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ಇದಕ್ಕೆ ಸಂಬಂಧಿಸಿದಂತೆ ಇಲಾಖಾವಾರು ಪ್ರಕರಣಗಳ ಸಂಖ್ಯೆಯನ್ನು **ಕೋಷ್ಟಕ 1.5.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5.3**
**ಒದಗಿಸದಿದ್ದಂತಹ ದಾಖಲೆಗಳ ವಿವರಗಳು**

| ಕಚೇರಿ/ಇಲಾಖೆಯ ಹೆಸರು | ಲೆಕ್ಕಪರಿಶೋಧನೆ ಮಾಡಲಾಗದಿದ್ದಂತಹ ಪ್ರಕರಣಗಳ ಸಂಖ್ಯೆ |
|---|---|
| ಮಾರಾಟಗಳು, ವಾಣಿಜ್ಯ, ಇತ್ಯಾದಿಗಳ ಮೇಲಿನ ತೆರಿಗೆಗಳು/ಮೌವತೆ | 528 |
| ರಾಜ್ಯ ಅಬಕಾರಿ | 21 |
| ಭೂ ಕಂದಾಯ | 49 |
| ಮೋಟಾರು ವಾಹನಗಳ ಮೇಲಿನ ತೆರಿಗೆ | 13 |
| ಗಣಿ ಮತ್ತು ಭೂವಿಜ್ಞಾನ | 10 |
| **ಒಟ್ಟು** | **621** |

## 1.5.4 ಲೆಕ್ಕಪರಿಶೋಧನಾ ಕರಡು ಕಂಡಿಕೆಗಳಿಗೆ ಇಲಾಖೆಗಳ ಪ್ರತಿಕ್ರಿಯೆ

ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸುವುದಕ್ಕಾಗಿ ಪ್ರಸ್ತಾವಿತ ಕರಡು ಕಂಡಿಕೆಗಳನ್ನು/ಸಮೀಕ್ಷೆಗಳನ್ನು ಮಹಾಲೇಖಾಪಾಲರಿಂದ ಸಂಬಂಧಿತ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ/ಕಾರ್ಯದರ್ಶಿಗಳಿಗೆ, ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಂತಹ ಅಂಶಗಳಿಗೆ ಅವರುಗಳ ಗಮನವನ್ನು ಸೆಳೆಯುವುದಕ್ಕಾಗಿ ಹಾಗೂ ತಮ್ಮ ಪ್ರತಿಕ್ರಿಯೆಯನ್ನು ಆರು ವಾರಗಳ ಒಳಗೆ ಕಳುಹಿಸುವಂತೆ ಅರೆ–ಸರ್ಕಾರಿ ಪತ್ರಗಳ ಮೂಲಕ ಕೋರಿಕೆಯೊಂದಿಗೆ ಕಳುಹಿಸಲಾಗುತ್ತದೆ. ಸರ್ಕಾರವು ನೀಡಿರುವ ನಿರ್ದೇಶನಗಳ (ಏಪ್ರಿಲ್ 1952) ಪ್ರಕಾರ, ಎಲ್ಲಾ ಇಲಾಖೆಗಳೂ ಕರಡು ಕಂಡಿಕೆಗಳು/ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳಿಗೆ ಅವುಗಳನ್ನು ಸ್ವೀಕರಿಸಿದ ದಿನಾಂಕದಿಂದ ಆರು ವಾರಗಳ ಒಳಗೆ ತಮ್ಮ ಉತ್ತರಗಳನ್ನು ಕಳುಹಿಸುವ ಅಗತ್ಯತೆ ಇರುತ್ತದೆ. ಇಲಾಖೆಗಳು/ಸರ್ಕಾರದಿಂದ ಉತ್ತರಗಳು ಬಾರದಿರುವ ವಾಸ್ತವಾಂಶವನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲಾಗಿರುವ ಅಂತಹ ಕಂಡಿಕೆಗಳ ಕೊನೆಯಲ್ಲಿ ತಪ್ಪದೇ ಸೂಚಿಸಲಾಗುತ್ತದೆ.

31 ಮಾರ್ಚ್ 2015ಕ್ಕೆ ಅಂತ್ಯಗೊಂಡ ಸಾಲಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯಲ್ಲಿ (ರಾಜಸ್ವ ವಲಯ) ಸೇರಿಸುವ ಪ್ರಸ್ತಾವನೆಯಲ್ಲಿದ್ದಂತಹ ಮುವತ್ತೆರಡು ಕರಡು ಕಂಡಿಕೆಗಳನ್ನು (ಎರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳೂ ಒಳಗೊಂಡಂತೆ) ಹೆಚ್ಚುವರಿ (ಅಡಿಷನಲ್) ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳಿಗೆ ಅವರುಗಳ ಹೆಸರನ್ನು ಸಂಬೋಧಿಸುವ ಮೂಲಕ ಕಳುಹಿಸಿಕೊಡಲಾಗಿದ್ದಿತು ಹಾಗೂ ಅವುಗಳ ಪ್ರತಿಗಳನ್ನು ಸಂಬಂಧಿತ ಇಲಾಖೆಗಳ ಮುಖ್ಯಸ್ಥರುಗಳಿಗೆ ಮೇ ಮತ್ತು ಸೆಪ್ಟಂಬರ್ 2015ರ ನಡುವೆ ಕಳುಹಿಸಿಕೊಡಲಾಗಿದ್ದಿತು.

ವಾಣಿಜ್ಯ ತೆರಿಗೆಗಳು, ರಾಜ್ಯ ಅಬಕಾರಿ, ಸಾರಿಗೆ, ಮುದ್ರಾಂಕಗಳು ಮತ್ತು ನೋಂದಣಿ, ರಾಜಸ್ವ ಮತ್ತು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗಳಿಗೆ ಸಂಬಂಧಿಸಿದ 30 ಕರಡು ಕಂಡಿಕೆಗಳಿಗೆ ಸಂಬಂಧಿಸಿದಂತೆ ಇಲಾಖೆಯ ಮುಖ್ಯಸ್ಥರುಗಳ ಉತ್ತರಗಳನ್ನು ಸ್ವೀಕರಿಸಲಾಯಿತು. ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಂತಹ ಅಂಶಗಳನ್ನು ಚರ್ಚಿಸುವುದಕ್ಕಾಗಿ ನಿರ್ಗಮನ ಮಟ್ಟದ ಸಭೆಗಳನ್ನು ಸರ್ಕಾರದ ಜೊತೆಯಲ್ಲಿ ನಡೆಸಲಾಯಿತು (ಅಕ್ಟೋಬರ್ 2015).

ವಾಣಿಜ್ಯ ತೆರಿಗೆಗಳ ಇಲಾಖೆ, ರಾಜ್ಯ ಅಬಕಾರಿ ಇಲಾಖೆ, ಸಾರಿಗೆ ಇಲಾಖೆ ಹಾಗೂ ಕಂದಾಯ ಇಲಾಖೆಗೆ ಸಂಬಂಧಿತ 30 ಕರಡು ಕಂಡಿಕೆಗಳಿಗೆ ಸರ್ಕಾರದ ಉತ್ತರಗಳನ್ನು ಸ್ವೀಕರಿಸಲಾಗಿದೆ. ಉಳಿದ ಎರಡು ಕರಡು ಕಂಡಿಕೆಗಳಿಗೆ ಸರ್ಕಾರದಿಂದ ಉತ್ತರಗಳು ಸ್ವೀಕೃತಗೊಂಡಿರುವುದಿಲ್ಲ (ನವಂಬರ್ 2015).

### 1.5.5 ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ಕ್ರಮಗಳು – ಸಂಕ್ಷಿಪ್ತ ಸ್ಥಿತಿಗತಿ

ಸಾರ್ವಜನಿಕ ಲೆಕ್ಕಪತ್ರ ಸಮಿತಿಯ (ಪಿ.ಎ.ಸಿ) ನಿಯಮಗಳು ಮತ್ತು ಕಾರ್ಯವಿಧಾನದ (ಆಂತರಿಕ ಕಾರ್ಯವಿಧಾನ) ಅನುಸಾರ ಲೆಕ್ಕಪರಿಶೋಧನಾ ವರದಿಯೊಂದನ್ನು ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟ ನಾಲ್ಕು ತಿಂಗಳುಗಳೊಳಗೆ ಸರ್ಕಾರದ ಇಲಾಖೆಗಳು ಲೆಕ್ಕಪರಿಶೋಧನಾ ಕಂಡಿಕೆಗಳ ಮೇಲೆ ಸವಿವರ ವಿವರಣೆಗಳನ್ನು (ಇಲಾಖಾ ಟಿಪ್ಪಣಿಗಳು) ಕರ್ನಾಟಕ ವಿಧಾನಸಭಾ ಸಚಿವಾಲಯಕ್ಕೆ ಸಲ್ಲಿಸಬೇಕು. ಆ ರೀತಿ ಸಲ್ಲಿಸುವ ಮೊದಲು ಅಂತಹ ಇಲಾಖಾ ಟಿಪ್ಪಣಿಗಳನ್ನು ಮಹಾಲೇಖಪಾಲರ ಪರಿಶೀಲನೆಗೆ ಒಳಪಡಿಸಬೇಕೆಂಬುದನ್ನೂ ಸಹ ನಿಯಮಗಳು ಅಪೇಕ್ಷಿಸುತ್ತವೆ.

31 ಮಾರ್ಚ್ 2010, 2011, 2012, 2013 ಮತ್ತು 2014 ಸಾಲುಗಳ ಅಂತ್ಯಕ್ಕೆ ಕರ್ನಾಟಕ ಸರ್ಕಾರದ ರಾಜಸ್ವ ವಲಯದ ಮೇಲೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳಲ್ಲಿ ಸೇರಿಸಲಾಗಿದ್ದಂತಹ 175 ಕಂಡಿಕೆಗಳನ್ನು (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳೂ ಸೇರಿದಂತೆ) ಹಾಗೂ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯನ್ನು ರಾಜ್ಯ ಶಾಸನ ಸಭೆಯ ಮುಂದೆ ಮಾರ್ಚ್ 2011 ಮತ್ತು ಫೆಬ್ರವರಿ 2015ರ ನಡುವಿನ ಅವಧಿಯಲ್ಲಿ ಮಂಡಿಸಲಾಗಿದ್ದಿತು.

ನವಂಬರ್ 2015ರಲ್ಲಿದ್ದಂತೆ, ಈ ಕಂಡಿಕೆಗಳ ಪೈಕಿ 130 ಕಂಡಿಕೆಗಳಿಗೆ ಇಲಾಖಾ ಟಿಪ್ಪಣಿಗಳನ್ನು ಸಂಬಂಧಿತ ಇಲಾಖೆಗಳಿಂದ ಒಂಬತ್ತು ತಿಂಗಳುಗಳ ಸರಾಸರಿ ವಿಳಂಬದೊಂದಿಗೆ ಸ್ವೀಕರಿಸಲಾಯಿತು. ಉಳಿದ 45 ಕಂಡಿಕೆಗಳಿಗೆ ಏಳು ಇಲಾಖೆಗಳಿಂದ (ವಾಣಿಜ್ಯ ತೆರಿಗೆಗಳು, ಭೂ ಕಂದಾಯ, ಮುದ್ರಾಂಕಗಳು ಮತ್ತು ನೋಂದಣಿ, ರಾಜ್ಯ ಅಬಕಾರಿ, ಸಾರಿಗೆ, ಮುಖ್ಯ ವಿದ್ಯುತ್ ಪರೀಕ್ಷಾಧಿಕಾರಿಯವರ ಕಚೇರಿ ಹಾಗೂ ಗಣಿಗಳು ಮತ್ತು ಭೂವಿಜ್ಞಾನ,) ಇಲಾಖಾ ಟಿಪ್ಪಣಿಗಳು ಸ್ವೀಕೃತಗೊಂಡಿರುವುದಿಲ್ಲ (ನವಂಬರ್ 2015).

ಲೆಕ್ಕಪರಿಶೋಧನಾ ವರದಿಗಳಲ್ಲಿ ಎತ್ತಿತೋರಿಸಲಾಗಿರುವ ಹಾಗೂ ವಸೂಲಾತಿಯಾಗದೇ ಉಳಿದಿರುವ ರಾಜಸ್ವ ಸಂಗ್ರಹಣೆಗೆ ಸಹಾಯಕವೂ ಆಗಿರುವ ಪ್ರಮುಖ ಅಂಶಗಳನ್ನು ಅನುಸರಿಸಲು ಕಾರ್ಯಾಂಗವು ಪರಿಣಾಮಕಾರಿತ್ವದಿಂದ ಕೂಡಿದ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ ಎಂಬುದನ್ನು ಇದು ಸೂಚಿಸುತ್ತದೆ. ವಸೂಲಾತಿಯಾಗದೇ ಉಳಿದಿರುವ ರಾಜಸ್ವ/ವರಮಾನವನ್ನು ವಸೂಲಾತಿ ಮಾಡುವಲ್ಲಿ ಹಾಗೂ ಆಡಳಿತ ನಿರ್ವಹಣೆಯನ್ನು ಉತ್ತಮಪಡಿಸುವಲ್ಲಿಯು ಕೂಡ ಇದು ಸಹಾಯಕವಾಗುತ್ತದೆ.

## 1.6 ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಜೊತೆ ವ್ಯವಹರಿಸುವುದಕ್ಕಾಗಿನ ವ್ಯವಸ್ಥೆಯ ವಿಶ್ಲೇಷಣೆ

ಪರೀಕ್ಷಣಾ ವರದಿಗಳು/ಲೆಕ್ಕಪರಿಶೋಧನಾ ವರದಿಗಳಲ್ಲಿ ಎತ್ತಿ ತೋರಿಸಲಾಗಿರುವ ಅಂಶಗಳಿಗೆ ಅನುಸರಣಾ ಕ್ರಮಗಳನ್ನು ಕೈಗೊಳ್ಳುವ ವ್ಯವಸ್ಥೆಯನ್ನು ವಿಶ್ಲೇಷಿಸುವುದಕ್ಕಾಗಿ ಒಂದು ಇಲಾಖೆಗೆ ಸಂಬಂಧಿಸಿದಂತೆ ಕಳೆದ 10 ವರ್ಷಗಳಲ್ಲಿ ನೀಡಲಾದ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿದ್ದ ಕಂಡಿಕೆಗಳು ಮತ್ತು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳ ಮೇಲೆ ತೆಗೆದುಕೊಳ್ಳಲಾದ ಕ್ರಮಗಳನ್ನು ಮೌಲ್ಯಮಾಪನ ಮಾಡಲಾಯಿತು ಹಾಗೂ ಈ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲಾಯಿತು.

ಮುಂದಿನ 1.6.1ರಿಂದ 1.6.2 ಕಂಡಿಕೆಗಳು ಕಳೆದ ಹತ್ತು ವರ್ಷಗಳಲ್ಲಿ ಸ್ಥಳೀಯ ಲೆಕ್ಕಪರಿಶೋಧನೆಯ ಸಮಯದಲ್ಲಿ ಕಂಡುಹಿಡಿಯಲಾಗಿದ್ದಂತಹ ಪ್ರಕರಣಗಳು ಹಾಗೂ ಅಲ್ಲದೇ 2004–05ರಿಂದ 2013–14 ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲ್ಪಟ್ಟಿದ್ದ ಪ್ರಕರಣಗಳಿಗೆ ಸಂಬಂಧಿಸಿದಂತೆ ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಯ[4] ಕಾರ್ಯನಿರ್ವಹಣೆಯನ್ನು ಚರ್ಚಿಸುತ್ತವೆ.

### 1.6.1 ಪರೀಕ್ಷಣಾ ವರದಿಗಳ ಸ್ಥಿತಿಗತಿ

ಕಳೆದ 10 ವರ್ಷಗಳಲ್ಲಿ ನೀಡಲಾದ ಪರೀಕ್ಷಣಾ ವರದಿಗಳು, ಈ ವರದಿಗಳಲ್ಲಿ ಸೇರಿಸಲ್ಪಟ್ಟಿರುವ ಕಂಡಿಕೆಗಳು ಹಾಗೂ 31 ಮಾರ್ಚ್ 2015ರಲ್ಲಿ ಅವುಗಳ ಸ್ಥಿತಿಗತಿಯ ಒಂದು ಸಂಕ್ಷಿಪ್ತ ಚಿತ್ರಣವನ್ನು ಕೆಳಗಿನ **ಕೋಷ್ಟಕ 1.6.1**ರಲ್ಲಿ ಅಂಕಣಪಟ್ಟಿ ಮಾಡಲಾಗಿದೆ.

[4] ರಾಜಸ್ವ ಶೀರ್ಷಿಕೆಗಳು 0030ರ ಅಡಿಯಲ್ಲಿ.

**ಕೋಷ್ಟಕ 1.6.1**
**ಪರೀಕ್ಷಣಾ ವರದಿಗಳ ಸ್ಥಿತಿಗತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರ್ಷ | ಪ್ರಾರಂಭಿಕ ಶಿಲ್ಕು | | | ಪ್ರಸಕ್ತ ಸಾಲಿನಲ್ಲಿ ಸೇರ್ಪಡೆ | | | ಪ್ರಸಕ್ತ ಸಾಲಿನಲ್ಲಿ ಇತ್ಯರ್ಥಗೊಂಡಿದ್ದು | | | ಅಂತಿಮ ಶಿಲ್ಕು | | |
|---|---|---|---|---|---|---|---|---|---|---|---|---|---|
| | | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸು ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸು ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸು ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸು ಮೌಲ್ಯ |
| 1. | 2005-06 | 253 | 602 | 60.99 | 107 | 151 | 2.30 | 63 | 131 | 4.77 | 297 | 622 | 58.53 |
| 2. | 2006-07 | 297 | 622 | 58.53 | 64 | 69 | 1.89 | 33 | 90 | 5.10 | 328 | 601 | 55.33 |
| 3. | 2007-08 | 328 | 601 | 55.33 | 31 | 47 | 1.51 | 12 | 27 | 0.49 | 347 | 621 | 56.35 |
| 4. | 2008-09 | 347 | 621 | 56.35 | 59 | 57 | 64.38 | 13 | 22 | 0.18 | 393 | 656 | 120.56 |
| 5. | 2009-10 | 393 | 656 | 120.56 | 108 | 135 | 141.19 | 04 | 30 | 0.14 | 497 | 761 | 261.61 |
| 6. | 2010-11 | 497 | 761 | 261.61 | 104 | 108 | 95.04 | 23 | 68 | 1.00 | 578 | 801 | 355.66 |
| 7. | 2011-12 | 578 | 801 | 355.66 | 143 | 285 | 7.34 | 73 | 120 | 1.06 | 648 | 966 | 361.93 |
| 8. | 2012-13 | 648 | 966 | 361.93 | 113 | 328 | 14.24 | 30 | 82 | 1.27 | 731 | 1212 | 374.90 |
| 9. | 2013-14 | 731 | 1212 | 374.90 | 132 | 350 | 43.51 | 156 | 462 | 16.63 | 707 | 1100 | 401.77 |
| 10. | 2014-15 | 707 | 1100 | 401.77 | 134 | 375 | 19.41 | 37 | 121 | 0.62 | 804 | 1354 | 420.57 |

## 1.6.2 ಒಪ್ಪಿಕೊಳ್ಳಲಾದ ಪ್ರಕರಣಗಳಲ್ಲಿ ವಸೂಲಾತಿ

ಕಳೆದ 10 ವರ್ಷಗಳಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರ್ಪಡೆಗೊಂಡಿದ್ದ ಕಂಡಿಕೆಗಳು, ಅವುಗಳ ಪೈಕಿ ಇಲಾಖೆಯು ಒಪ್ಪಿಕೊಂಡಿದ್ದವುಗಳು ಹಾಗೂ ವಸೂಲಾತಿ ಮಾಡಲಾದ ಮೊತ್ತ, ಇವುಗಳನ್ನು **ಕೋಷ್ಟಕ 1.6.2**ರಲ್ಲಿ ನಮೂದಿಸಲಾಗಿದೆ:

**ಕೋಷ್ಟಕ 1.6.2**
**ಒಪ್ಪಿಕೊಳ್ಳಲಾಗಿರುವ ಪ್ರಕರಣಗಳಲ್ಲಿ ಮಾಡಲಾಗಿರುವ ವಸೂಲಾತಿ**

**(₹ ಕೋಟಿಯಲ್ಲಿ)**

| ಲೆಕ್ಕ ಪರಿಶೋಧನಾ ವರದಿಯು ಸಂಬಂಧಿಸಿದ್ದ ವರ್ಷ | ಸೇರ್ಪಡೆ ಗೊಂಡಿದ್ದ ಕಂಡಿಕೆಗಳ ಸಂಖ್ಯೆ | ಕಂಡಿಕೆಗಳಲ್ಲಿ ಅಡಕವಾಗಿದ್ದ ಹಣಕಾಸಿನ ಮೌಲ್ಯ | ಹಣಕಾಸಿನ ಮೌಲ್ಯವು ಒಳಗೊಂಡಂತೆ ಒಪ್ಪಿಕೊಳ್ಳಲಾಗಿದ್ದ ಕಂಡಿಕೆಗಳ ಸಂಖ್ಯೆ | ಒಪ್ಪಿಕೊಳ್ಳ ಲಾಗಿದ್ದ ಕಂಡಿಕೆಗಳಲ್ಲಿ ಅಡಕವಾಗಿದ್ದ ಹಣಕಾಸಿನ ಮೌಲ್ಯ | **2014–15** ರಲ್ಲಿ ವಸೂಲಾತಿ ಮಾಡಲಾದ ಮೊತ್ತ | **31–03–2015** ರಲ್ಲಿದ್ದಂತೆ ಒಪ್ಪಿಕೊಳ್ಳಲಾದ ಪ್ರಕರಣಗಳಲ್ಲಿ ವಸೂಲಾತಿ ಯ ಸಂಚಿತ ಸ್ಥಿತಿಗತಿ |
|---|---|---|---|---|---|---|
| 2004-05 | - | - | - | - | - | - |
| 2005-06 | 05 | 100.75 | 05 | 46.38 | 0 | |
| 2006-07 | 03 | 31.26 | 01 | 0.35 | 0 | - |
| 2007-08 | 02 | 2.44 | 01 | 0.03 | 0 | 0.03 |
| 2008-09 | 06 | 325.83 | 06 | 283.04 | 0 | 14.13 |
| 2009-10 | 07 | 16.49 | 07 | 12.03 | 0 | 0.15 |
| 2010-11 | 05 | 3.22 | 03 | 7.25 | 0 | 0.56 |
| 2011-12 | 06 | 2.39 | 05 | 1.21 | 0 | 0.03 |
| 2012-13 | 08 | 18.89 | 02 | 0.06 | 0 | 0.06 |
| 2013-14 | 05 | 3.84 | 04 | 0.96 | 0.94 | 0.94 |

ಒಪ್ಪಿಕೊಳ್ಳಲಾದ ಪ್ರಕರಣಗಳಲ್ಲಿಯೂ ಸಹ ವಸೂಲಾತಿಯ ಪ್ರಗತಿಯು ಕಳೆದ ಹತ್ತು ವರ್ಷಗಳಲ್ಲಿ ಬಹಳಷ್ಟು ಮಂದಗತಿಯಲ್ಲಿದ್ದಿತು ಎಂಬುದು ಮೇಲಿನ ಕೋಷ್ಟಕದಿಂದ ಸ್ಪಷ್ಟವಾಗುತ್ತದೆ.

ಒಪ್ಪಿಕೊಳ್ಳಲಾದ ಪ್ರಕರಣಗಳಲ್ಲಿ ಒಳಗೊಂಡಿರುವ ಬಾಕಿಗಳ ವಸೂಲಾತಿಯ ತ್ವರಿತ ಕ್ರಮವನ್ನು ಅನುಸರಿಸಲು ಹಾಗೂ ಮೇಲ್ವಿಚಾರಣೆ ಮಾಡಲು ಇಲಾಖೆಯು ತತ್ಕ್ಷಣದ ಕ್ರಮವನ್ನು ತೆಗೆದುಕೊಳ್ಳಬೇಕು.

## 1.7 ಲೆಕ್ಕಪರಿಶೋಧನೆಯ ಪೂರ್ವಭಾವಿ ಯೋಜನೆ

ವಿವಿಧ ಇಲಾಖೆಗಳ ಘಟಕ ಕಚೇರಿಗಳನ್ನು, ಅವುಗಳ ರಾಜಸ್ವದ ಸ್ಥಿತಿಗತಿ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಹಿಂದಿನ ಪ್ರವೃತ್ತಿ ಮತ್ತು ಇನ್ನಿತರೆ ಪ್ರಮಿತಿಗಳಿಗೆ ತಕ್ಕಂತೆ ಅಧಿಕ, ಮಧ್ಯಮ ಹಾಗೂ ಅಲ್ಪ ಪ್ರಮಾಣದ ಸಂಭಾವ್ಯ ಅಪಾಯಗಳುಳ್ಳ ಸಂಸ್ಥೆಗಳೆಂಬುದಾಗಿ ವಿಂಗಡಿಸಲಾಗುವುದು. ವಾರ್ಷಿಕ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯು ಸಂಭಾವ್ಯ ಅಪಾಯದ ಚಿಂತನೆಯನ್ನು ಆಧರಿಸಿದ್ದು, ಅದು ಇನ್ನಿತರವುಗಳೊಂದಿಗೆ ಸರ್ಕಾರದ ರಾಜಸ್ವ ಮತ್ತು ತೆರಿಗೆ ಆಡಳಿತದಲ್ಲಿ ಪ್ರಮುಖ ವಿಚಾರಗಳು ಅಂದರೆ ಆಯವ್ಯಯ ಭಾಷಣ, ರಾಜ್ಯ ಆರ್ಥಿಕ ಸ್ಥಿತಿಗತಿಯ ಮೇಲಿನ ಶ್ವೇತಪತ್ರ, ಹಣಕಾಸು ಆಯೋಗದ (ರಾಜ್ಯ ಮತ್ತು ಕೇಂದ್ರ) ವರದಿಗಳು, ತೆರಿಗೆ ಸುಧಾರಣಾ ಆಯೋಗದ ಶಿಫಾರಸ್ಸುಗಳು, ಕಳೆದ ಐದು ವರ್ಷಗಳಲ್ಲಿನ ಕಂದಾಯ ಗಳಿಕೆಯ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ, ತೆರಿಗೆ ನಿರ್ವಹಣೆಯ ವೈಶಿಷ್ಟ್ಯಗಳು, ಲೆಕ್ಕಪರಿಶೋಧನಾ ವ್ಯಾಪ್ತಿ ಹಾಗೂ ಕಳೆದ ಐದು ವರ್ಷಗಳಲ್ಲಿ ಅದರ ಪ್ರಭಾವ, ಇತ್ಯಾದಿಗಳನ್ನು ಒಳಗೊಂಡಿದೆ.

2014–15 ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಒಳಪಡಿಸಬೇಕಾದಂತಹ 1,218 ಘಟಕಗಳಿದ್ದವು, ಅವುಗಳ ಪೈಕಿ 456 ಘಟಕಗಳಿಗೆ ಪೂರ್ವಭಾವಿ ಯೋಜನೆಯನ್ನು ತಯಾರಿಸಲಾಯಿತು ಹಾಗೂ ಶೇಕಡಾ 37.68ರಷ್ಟಾಗುವ 459 ಘಟಕಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸಲಾಯಿತು. ವಿವರಗಳನ್ನು ಈ ಕೆಳಗಿನ **ಕೋಷ್ಟಕ 1.7.1**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 1.7.1**
**ಲೆಕ್ಕಪರಿಶೋಧನೆಗೆ ಒಳಪಡಿಸಲಾದ ಘಟಕಗಳ ವಿವರಗಳು**

| ಇಲಾಖೆ | ಘಟಕಗಳ ಸಂಖ್ಯೆ | | |
|---|---|---|---|
| | 2014–15 ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಒಳಪಡಿಸಬೇಕಾಗಿದ್ದ ಘಟಕಗಳು | 2014–15 ಸಾಲಿನಲ್ಲಿ ಲೆಕ್ಕಪರಿಶೋಧನೆಗಾಗಿ ಪೂರ್ವಭಾವಿ ಯೋಜನೆಯನ್ನು ತಯಾರಿಸಲಾದ ಘಟಕಗಳು | 2014–15 ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಒಳಪಡಿಸಲಾದ ಘಟಕಗಳು |
| ವಾಣಿಜ್ಯ ತೆರಿಗೆಗಳು | 416 | 168 | 168 |
| ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಗಳು | 283 | 132 | 133 |
| ಮೋಟಾರು ವಾಹನಗಳ ಮೇಲಿನ ತೆರಿಗೆಗಳು | 76 | 51 | 52 |
| ಭೂ ಕಂದಾಯ | 253 | 60 | 60 |
| ರಾಜ್ಯ ಅಬಕಾರಿ | 125 | 30 | 30 |
| ಖನಿಜ ಸ್ವೀಕೃತಿಗಳು | 34 | 14 | 15 |
| ಮುಖ್ಯ ವಿದ್ಯುಚ್ಛಕ್ತಿ ಪರೀಕ್ಷಣಾಧಿಕಾರಿಯವರ ಕಾರ್ಯಾಲಯ | 31 | 1 | 1 |
| **ಒಟ್ಟು** | **1,218** | **456** | **459** |

ಮೇಲೆ ತಿಳಿಸಲಾದ ಅನುಪಾಲನಾ ಲೆಕ್ಕಪರಿಶೋಧನೆಯಲ್ಲದೇ, ಪ್ರಸಕ್ತ ಸಾಲಿನಲ್ಲಿ ಸಾರಿಗೆ ಇಲಾಖೆಯಿಂದ 'ಮೋಟಾರು ವಾಹನಗಳ ಮೇಲೆ ತೆರಿಗೆಗಳನ್ನು ವಿಧಿಸುವಿಕೆ ಮತ್ತು ವಸೂಲಾತಿ' ಹಾಗೂ 'ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಗಣಕೀಕರಣ' ಈ ವಿಷಯಗಳ ಬಗ್ಗೆ ಎರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳನ್ನು ಕೈಗೆತ್ತಿಕೊಳ್ಳಲಾಯಿತು..

## 1.8 ಲೆಕ್ಕಪರಿಶೋಧನೆಯ ಫಲಿತಾಂಶಗಳು

**ಪ್ರಸಕ್ತ ಸಾಲಿನಲ್ಲಿ ನಡೆಸಲಾದ ಸ್ಥಳೀಯ ಲೆಕ್ಕಪರಿಶೋಧನೆಯ ಸ್ಥಿತಿಗತಿ**

ಮಾರಾಟಗಳ ಮೇಲಿನ ತೆರಿಗೆ/ಮೌಲ್ಯ ವರ್ಧಿತ ತೆರಿಗೆ, ರಾಜ್ಯ ಅಬಕಾರಿ, ಮೋಟಾರು ವಾಹನಗಳು, ಸರಕುಗಳು ಮತ್ತು ಪ್ರಯಾಣಿಕರು, ಮತ್ತಿತರ ಇಲಾಖಾ ಕಚೇರಿಗಳ 459 ಘಟಕಗಳ 2014–15 ಸಾಲಿನಲ್ಲಿ ಮಾಡಲಾದ ದಾಖಲೆಗಳ ಪರೀಕ್ಷಾ ಪರಿಶೀಲನೆಯು 1,471 ಪ್ರಕರಣಗಳಲ್ಲಿ ₹ 331.99 ಕೋಟಿ ಒಟ್ಟಾರೆ ಮೊತ್ತದ ರಾಜಸ್ವವನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು/ರಾಜಸ್ವ/ವರಮಾನದ ನಷ್ಟ ಸಂಭವಿಸಿದ್ದುದನ್ನು ತೋರಿಸಿಕೊಟ್ಟಿತು. ಪ್ರಸಕ್ತ ಸಾಲಿನಲ್ಲಿ, ಸಂಬಂಧಪಟ್ಟ ಇಲಾಖೆಗಳು ₹ 51.21ಕೋಟಿ ಮೊತ್ತವು ಒಳಗೊಂಡಂತೆ 2014–15 ಸಾಲಿನಲ್ಲಿ ಸ್ಪಷ್ಟಪಡಿಸಲಾಗಿದ್ದಂತಹ 469 ಪ್ರಕರಣಗಳಲ್ಲಿ ಕರನಿರ್ಧಾರಣೆಯನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದು ಮತ್ತಿತರ ನ್ಯೂನತೆಗಳನ್ನು ಒಪ್ಪಿಕೊಂಡವು ಹಾಗೂ 57 ಪ್ರಕರಣಗಳಲ್ಲಿ ಒಳಗೊಂಡಿದ್ದಂತಹ ₹ 2.22 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದವು. ಹಿಂದಿನ ಲೆಕ್ಕಪರಿಶೋಧನೆಯ ಅವಧಿಗಳಲ್ಲಿ ಗಮನಿಸಲಾಗಿದ್ದಂತಹ 510 ಪ್ರಕರಣಗಳಲ್ಲಿ 2014–15ರಲ್ಲಿ ಇಲಾಖೆಗಳು ₹ 31.89 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದವು.

## 1.9 ಈ ವರದಿಯ ವ್ಯಾಪ್ತಿ

ಈ ವರದಿಯು, ಮೇಲೆ ಉಲ್ಲೇಖಿಸಲ್ಪಟ್ಟಿರುವಂತೆ ₹ 337.65 ಕೋಟಿ ಮೊತ್ತವು ಒಳಗೊಂಡಂತೆ ಎರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯೂ ಸೇರಿದಂತೆ ಸ್ಥಳೀಯ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಗಮನಿಸಲಾದಂತಹ ಹಾಗೂ ಹಿಂದಿನ ಸಾಲುಗಳಲ್ಲಿ ಗಮನಿಸಲಾದಂತಹ (ಹಿಂದಿನ ವರದಿಗಳಲ್ಲಿ ಸೇರಿಸಲು ಸಾಧ್ಯವಾಗದಿದ್ದಂತಹ) ಲೆಕ್ಕಪರಿಶೋಧನಾ ಅಂಶಗಳಿಂದ ಆಯ್ಕೆ ಮಾಡಲಾಗಿರುವ 31 ಕಂಡಿಕೆಗಳನ್ನು ಒಳಗೊಂಡಿದೆ.

ಇಲಾಖೆಗಳು/ಸರ್ಕಾರವು ₹ 20 ಕೋಟಿ ಮೊತ್ತವು ಒಳಗೊಂಡಂತೆ ಲೆಕ್ಕಪರಿಶೋಧನೆಯ ಅಭಿಪ್ರಾಯಗಳನ್ನು ಒಪ್ಪಿಕೊಂಡವು ಹಾಗೂ ಅದರ ಪೈಕಿ ₹ 4.61 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದವು. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರಗಳು ಸ್ವೀಕೃತಗೊಂಡಿರುವುದಿಲ್ಲ (ನವಂಬರ್ 2015). ಇವುಗಳ ಬಗ್ಗೆ ಮುಂದಿನ II ರಿಂದ VIIರವರೆಗಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.